
# ಶ್ರೀ ಅಳಸಿಂಗ ಪೆರುಮಾಳ್

❑ ಕೆ.ಎಲ್. ರಮಾಮಣಿ

**ಸ್ವಾಮಿ ವಿವೇಕಾನಂದರ ಕಾರ್ಯಸಾಧನೆಯಲ್ಲಿ ಶ್ರೀ ಅಳಸಿಂಗ ಪೆರುಮಾಳರ ಪಾತ್ರ ಅವಿಸ್ಮರಣೀಯವಾದುದು. ಅವರ ಜೀವನದ ಕಿರುಪರಿಚಯವನ್ನು ನೀಡಿರುವ ಶ್ರೀಮತಿ ರಮಾಮಣಿಯವರು ಮೈಸೂರಿನ ಮಾತೃಮಂಡಳಿ ವಿದ್ಯಾಸಂಸ್ಥೆಯಲ್ಲಿ ಅಧ್ಯಾಪಕಿಯಾಗಿ ಸೇವೆ ಸಲ್ಲಿಸುತ್ತಿರುವರು.**

ತ್ರೇತಾಯುಗದಲ್ಲಿ ಶ್ರೀರಾಮಚಂದ್ರನಾಗಿ ಅವತರಿಸಿದ ಭಗವಂತ ಸರ್ವಶಕ್ತ, ಸರ್ವಕಾರ್ಯಸಮರ್ಥ. ಆದರೂ ರಾವಣಸಂಹಾರದ ಕಾರ್ಯದಲ್ಲಿ ಲಕ್ಷ್ಮಣ, ಹನುಮಂತ, ಸುಗ್ರೀವ, ಜಾಂಬವಂತ, ನಳ, ನೀಲ ಮುಂತಾದ ಮಹಾನ್ ವೀರರಿಗೆ ಮಾತ್ರವಲ್ಲ, ಸಾಧಾರಣ ವಾನರರಿಗೂ ಅವಕಾಶ ನೀಡಿದ. ಪ್ರತಿಯೊಬ್ಬ ವಾನರನಿಗೂ ತಾನೂ ರಾಮಕಾರ್ಯದಲ್ಲಿ ಭಾಗವಹಿಸಿದ ಆತ್ಮತೃಪ್ತಿ, ಸಂತೋಷ; ತಾವೂ ಕೆಲಸ ಮಾಡಬಲ್ಲೆವೆಂಬ ಆತ್ಮವಿಶ್ವಾಸ. ಜಿತೇಂದ್ರಿಯನೂ ಬುದ್ಧಿಮತಾಂ ವರಿಷ್ಠನೂ ಆದ ಹನುಮಂತನು ಸೀತೆಯನ್ನು ಹುಡುಕುತ್ತಾ ಸಮುದ್ರತೀರಕ್ಕೆ ಬಂದುನಿಂತಾಗ ಎಲ್ಲರಂತೆ ತಾನೂ ಚಿಂತೆಗೊಳಗಾದ. ತನ್ನ ಸಾಮರ್ಥ್ಯವನ್ನು ತಾನೇ ಮರೆತಿದ್ದ ಹನುಮಂತನನ್ನು ಎಚ್ಚರಿಸುವ ಕಾರ್ಯ ಜಾಂಬವಂತನಿಂದ ಆದ ಮೇಲೆ ಮುಗಿಲೆತ್ತರಕ್ಕೆ ಬೆಳೆದ ಹನುಮಂತ ಸಾಗರ ದಾಟಿ, ಸೀತೆಯನ್ನು ಕಂಡು ಚೂಡಾಮಣಿಯನ್ನು ತಂದದ್ದು ಮಾತ್ರವಲ್ಲ, ಲಂಕೆಯನ್ನೂ ಸುಟ್ಟು ರಾವಣನಿಗೆ ಎಚ್ಚರಿಕೆಯನ್ನೂ ನೀಡಿ ಬಂದ.



ಕಲಿಯುಗದಲ್ಲಿ ಅವತಾರವರಿಷ್ಠರೂ, ಸರ್ವಧರ್ಮಸ್ವರೂಪರೂ ಆದ ಶ್ರೀರಾಮಕೃಷ್ಣ ಪರಮಹಂಸರ ಅವತಾರ ಇಂದಿನ ಯುಗಕ್ಕೆ ಬೇಕಾದ ಸರ್ವಧರ್ಮ ಸಮನ್ವಯ ತತ್ತ್ವವನ್ನು ವಿಶ್ವದಾದ್ಯಂತ ಸಾರುವುದೇ ಆಗಿದೆ. ಶ್ರೀರಾಮಕೃಷ್ಣರ ಲೀಲಾಪ್ರಸಂಗದಲ್ಲೂ, ಸ್ವಾಮಿ ವಿವೇಕಾನಂದ, ಮಾಸ್ಟರ್ ಮಹಾಶಯ, ರಾಣಿ ರಾಸಮಣಿ, ಮಥುರಬಾಬು ಮುಂತಾದವರಿಂದ ಹಿಡಿದು ಅನೇಕ ಸಾಮಾನ್ಯರ ವರೆಗೆ ಅವಕಾಶ. ಭಾರತದ ಸನಾತನ ಧರ್ಮವನ್ನು ವಿಶ್ವದಾದ್ಯಂತ ಸಾರಲು ಅವರು ಆರಿಸಿಕೊಂಡ ಶಿಷ್ಯ ಸ್ವಾಮಿ ವಿವೇಕಾನಂದರು. ಇಂಥ ಸ್ವಾಮಿ ವಿವೇಕಾನಂದರನ್ನು ಸಾಗರದಾಚೆಯ ನಾಡಿಗೆ ಕಳುಹಿಸಿ ಸರ್ವಧರ್ಮ ಸಮನ್ವಯ ತತ್ತ್ವವನ್ನು ಬೋಧಿಸಲು ಚಿಕಾಗೋದ ಸರ್ವಧರ್ಮಸಭೆಯಲ್ಲಿ ಭಾಗವಹಿಸಲು ನಿಮಿತ್ತರಾದವರು ಶ್ರೀ ಅಳಸಿಂಗ ಪೆರುಮಾಳ್‌ರವರು.

ಅಳಸಿಂಗ ಪೆರುಮಾಳ್ ೧೮೬೫ನೆಯ ಸಂವತ್ಸರದಲ್ಲಿ ಜನಿಸಿದರು. ಅವರ ಜನ್ಮಸ್ಥಳ ಕರ್ನಾಟಕದ ಚಿಕ್ಕಮಗಳೂರು. ಅವರು ಮಂಡಯಂ ಶ್ರೀವೈಷ್ಣವರು, ತೆಂಗಲೈ ಸಂಪ್ರದಾಯಕ್ಕೆ ಸೇರಿದವರು. ತಂದೆ ಮಂಡಯಂ ಚಕ್ರವರ್ತಿ ನರಸಿಂಹಾಚಾರ್ಯರು. ಮದರಾಸಿನಲ್ಲಿ ಕಸ್ಟಮ್ಸ್ ಇಲಾಖೆಯಲ್ಲಿ ಹುದ್ದೆ ದೊರಕಿದ್ದರಿಂದ ಅವರ ಸಂಸಾರವು ಮದರಾಸಿಗೆ ಹೊರಟಿತು. ಅಳಸಿಂಗರ ವಿದ್ಯಾಭ್ಯಾಸವು ಮದರಾಸಿನಲ್ಲಿ ನಡೆಯಿತು. ತಮ್ಮ ಇಪ್ಪತ್ತನೆಯ ವಯಸ್ಸಿನಲ್ಲಿ ಉಪಾಧ್ಯಾಯ ವೃತ್ತಿಯಲ್ಲಿ ತೊಡಗಿದ ಅಳಸಿಂಗರು ಕೊನೆಯವರೆಗೆ ಆ ವೃತ್ತಿಯಲ್ಲಿ ದುಡಿದರು. ಅವರಿಗೆ ಅಂದಿನ ವಿದ್ಯಾವಂತರೆನಿಸಿಕೊಂಡ ಭಾರತೀಯರ ಬಗೆಗೆ ಪಶ್ಚಾತ್ತಾಪವೆನಿಸುತ್ತಿತ್ತು. ಪಾಶ್ಚಾತ್ಯರ ಅನುಕರಣೆ, ತಮ್ಮದೇ ಧರ್ಮವನ್ನು ಹೀನಾಯವಾಗಿ ಕಾಣುವುದು, ದೇಶದ ಜನತೆಯ ಅಜ್ಞಾನ, ಬಡತನ ಇವುಗಳ ಬಗೆಗಿನ ನಿರಾಸಕ್ತಿ ಇವುಗಳೇ ಅದಕ್ಕೆ ಕಾರಣ. ಯುವಜನತೆಯಲ್ಲಿ ನೈತಿಕ ಗುಣಗಳನ್ನು ಬೆಳೆಸಿ ಹಿಂದೂಧರ್ಮದ ನೈಜಸ್ವರೂಪವನ್ನು ತಿಳಿಸಿ ಅವರಲ್ಲಿ ಸ್ವಾಭಿಮಾನವನ್ನು ಬೆಳೆಸುವುದು, ನಮ್ಮ ದೇಶ, ನಮ್ಮ ಜನ, ನಮ್ಮ ಧರ್ಮ ಎಂಬ ಅಭಿಮಾನದಿಂದ ತಲೆಯೆತ್ತಿ ನಿಲ್ಲುವಂತೆ ಮಾಡಬೇಕು ಎಂಬುದು ಅವರ ತೀವ್ರವಾದ ಇಚ್ಛೆ. ಅದಕ್ಕಾಗಿ ಹೇಗೆ ದುಡಿಯಬೇಕು? ಮಾರ್ಗದರ್ಶನ ನೀಡುವರಾರು? ಎಂಬ ಚಿಂತೆಯಲ್ಲಿದ್ದಾಗ ಇದೇ ಇಚ್ಛೆಯನ್ನೂ, ಪ್ರಚಂಡ ಶಕ್ತಿಯನ್ನೂ ಪಡೆದಿದ್ದ 'ಸ್ವಾಮಿ ವಿವೇಕಾನಂದರನ್ನು ನೋಡಿದರು. ಪ್ರಥಮ ದರ್ಶನದಲ್ಲಿಯೇ ಅಳಸಿಂಗರಿಗೆ ಈತನೇ ನನ್ನ ಆರಾಧ್ಯ ಮೂರ್ತಿ' ಎಂದು ಅರಿವಾಯಿತು.

೧೮೯೨ರಲ್ಲಿ ಅಂದಿನ ಡೆಪ್ಯುಟಿ ಅಕೌಂಟೆಂಟ್ ಜನರಲ್ ಆಗಿದ್ದ ಮನ್ಮಥನಾಥ ಭಟ್ಟಾಚಾರ್ಯರ ಮನೆಯಲ್ಲಿ ಅಳಸಿಂಗರಿಗೆ ಸ್ವಾಮೀಜಿಯವರ ಪ್ರಥಮ ದರ್ಶನ ದೊರೆಯಿತು. ಅವರಿತ್ತ

'ತ್ಯಾಗ-ಸೇವೆ'ಯ ಮಂತ್ರವನ್ನು ಕಾರ್ಯರೂಪಕ್ಕೆ ತರಲು ತಮ್ಮ ಮಿತ್ರರೊಂದಿಗೆ ಬಂದು ಸಮಾಲೋಚಿಸುತ್ತಿದ್ದರು. ಇದೇ ಸಮಯದಲ್ಲಿ, ಅಂದರೆ ೧೮೯೩ರಲ್ಲಿ, ನಡೆಯುವ ವಿಶ್ವಧರ್ಮ ಸಮ್ಮೇಳನಕ್ಕೆ ಹಿಂದೂಧರ್ಮದ ಪ್ರತಿನಿಧಿಯಾಗಿ ಭಾಗವಹಿಸಬೇಕೆಂದು ಸ್ವಾಮೀಜಿಯವರನ್ನು ಪ್ರಾರ್ಥಿಸತೊಡಗಿದರು. ಅದಕ್ಕಾಗಿ ಚಂದಾ ಹಣವನ್ನು ಸಂಗ್ರಹಿಸತೊಡಗಿದರು. ಆದರೆ ಸ್ವಾಮಿ ವಿವೇಕಾನಂದರು "ತಾವು ಅಮೇರಿಕಾಗೆ ಹೋಗಬೇಕೆನ್ನುವುದು ತನ್ನ ಇಚ್ಛೆ ಎಂದು ಭಗವತಿಯು ನನಗೆ ತೋರಿಸಬೇಕು" ಎಂದು ಹೇಳಿ ಸಂಗ್ರಹವಾದ ಹಣವನ್ನು ಬಡಬಗ್ಗರಿಗೆ ಹಂಚಲು ಹೇಳಿದರು. ಆಳಸಿಂಗರಿಗೆ ತೀವ್ರ ನಿರಾಶೆಯಾದರೂ ಗುರುವಿನ ಆಜ್ಞೆಯನ್ನು ಶಿರಸಾವಹಿಸಿದರು. ಎಂದಿನಂತೆ ಸ್ವಾಮೀಜಿಯವರನ್ನು ಭೇಟಿ ಮಾಡುತ್ತಿದ್ದರು. ಸ್ವಪ್ನದಲ್ಲಿ ಶ್ರೀಗುರುದೇವ ರಾಮಕೃಷ್ಣ ಪರಮಹಂಸರ ಅನುಮತಿ, ಶ್ರೀಮಾತೆಯವರ ಪತ್ರದ ಆಶೀರ್ವಾದ ದೊರೆತ ಒಡನೆಯೇ ಸ್ವಾಮೀಜಿಯವರು ಆಳಸಿಂಗರಿಗೆ ತಾವು ಅಮೇರಿಕಾಗೆ ತೆರಳಲು ಸಿದ್ಧ ಎಂದು ತಿಳಿಸಿದರು. ಕರ್ಮಯೋಗಿ ಆಳಸಿಂಗರು "ಬುದ್ಧಿಗೆಟ್ಟ ಹುಡುಗರು, ದಾರಿಗೆಟ್ಟ ಉತ್ಸಾಹಿಗಳು" ಎಂಬ ಜನರ ನಿಂದೆಯನ್ನು ಎದುರಿಸಿ, ಹಣ ಸಂಗ್ರಹಿಸಿ, ಸ್ವಾಮೀಜಿಯವರ ವಿದೇಶಯಾತ್ರೆಗೆ ಸರ್ವಸಿದ್ಧತೆಯನ್ನೂ ಮಾಡಿ, ಅವರ ವಿಜಯಕ್ಕಾಗಿ ಪ್ರಾರ್ಥಿಸುತ್ತಾ ನಿಂತರು. ಉತ್ತರಭಾರತದ ಮಹಾತ್ಮನ ದಿಗ್ವಿಜಯ ಯಾತ್ರೆಗೆ ದಕ್ಷಿಣದ ಆಳಸಿಂಗರು ನಿಮಿತ್ತವಾದುದು ಶ್ರೀರಾಮಕೃಷ್ಣರ ಲೀಲಾಪ್ರಸಂಗ.

ಸ್ವಾಮಿ ವಿವೇಕಾನಂದರು ತಮ್ಮ ವಿದೇಶ ಯಾತ್ರೆಯ ಸಮಯದಲ್ಲಿ, ಆಳಸಿಂಗರಿಗೆ ಪತ್ರದ ಮೂಲಕ ತಮ್ಮ ಕಷ್ಟ, ಸುಖ, ಅನುಭವ ಎಲ್ಲವನ್ನೂ ತಿಳಿಸಿ ಪತ್ರ ಬರೆಯುತ್ತಿದ್ದುದು ಮಾತ್ರವಲ್ಲದೇ ಮಾರ್ಗದರ್ಶನವನ್ನೂ ಮಾಡುತ್ತಿದ್ದರು. ಅವರಿಬ್ಬರ ಆತ್ಮೀಯತೆ ಎಷ್ಟಿತ್ತೆಂದರೆ "ನಾನು ಹಸಿವಿನಿಂದ ಕಷ್ಟಪಡುತ್ತಿದ್ದೇನೆ. ಹಣವೆಲ್ಲಾ ಖರ್ಚಾಗಿಹೋಗಿದೆ. ಹಿಂದಕ್ಕೆ ಬರಲಾದರೂ ಹಣವನ್ನು ಕಳುಹಿಸು" ಎಂದು ಸ್ವಾಮೀಜಿ ಬರೆದರು. ಆಳಸಿಂಗರು ಬಂಧು-ಬಳಗವಿಲ್ಲದ ದೂರದೇಶಕ್ಕೆ ಬಡಸಂನ್ಯಾಸಿಯನ್ನು ಕಳುಹಿಸಿಬಿಟ್ಟೆನಲ್ಲ ಎಂದು ಸಂಬಳದ ಹಣದ ಜೊತೆ ಸಾವಿರ ರೂ. ಸಾಲವನ್ನೂ ಮಾಡಿ ಕಳುಹಿಸಿದರು.

ಆಳಸಿಂಗರಿಗೆ ಸಣ್ಣ ವಯಸ್ಸಿನಲ್ಲೇ ವಿವಾಹವಾಗಿತ್ತು. ಪತ್ನಿ ಶ್ರೀರಂಗಮ್ಮನವರು ಸಾಧ್ವಿ. ಪತಿಯ ಕಾರ್ಯಗಳಿಗೆ ಅನುಕೂಲೆಯಾಗಿದ್ದರು. ಮನೆಯಲ್ಲಿ ವೃದ್ಧರಾದ ಅತ್ತೆ, ಮೈದುನ, ಐದು ಜನ ಮಕ್ಕಳಲ್ಲದೆ ಮನೆಗೆ ಬಂದುಹೋಗುವ ಬಂಧುಮಿತ್ರರೂ ಸೇರಿ ಬೃಹತ್ ಕುಟುಂಬಿಯಾಗಿದ್ದ ಆಳಸಿಂಗರಿಗೆ ತಕ್ಕ ಪತ್ನಿಯಾಗಿದ್ದರು. ಮನೆಯ ತಾಪತ್ರಯಗಳು ಪತಿಗೆ ತಾಕದಂತೆ ನೋಡಿಕೊಳ್ಳುತ್ತಿದ್ದರು.

ಶ್ರೀ ಆಳಸಿಂಗರು ಉತ್ತಮ ಉಪಾಧ್ಯಾಯರು ಎನ್ನಿಸಿಕೊಂಡು ಎಲ್ಲರ ಗೌರವಕ್ಕೂ ಪಾತ್ರರಾಗಿದ್ದರು. ಎಂತಹ ವಿದ್ಯಾರ್ಥಿಯಾದರೂ ಸರಿ ಅರ್ಥವಾಗುವಂತೆ ಪಾಠ ಹೇಳಿಕೊಡುತ್ತಿದ್ದುದು ಮಾತ್ರವಲ್ಲ, ವರ್ಷಾಂತ್ಯದಲ್ಲಿ ಪುನರಾವೃತ್ತಿಯ ತರಗತಿಗಳನ್ನೂ ತೆಗೆದುಕೊಳ್ಳುತ್ತಿದ್ದರು. ಆ ತರಗತಿಗಳು ಅದೆಷ್ಟು ಪ್ರಸಿದ್ಧವಾಗಿತ್ತೆಂದರೆ ಬೇರೆ ಬೇರೆ ಶಾಲೆಯ ಮಕ್ಕಳೂ ಅಲ್ಲಿಗೆ ಬಂದು ಕಲಿಯುತ್ತಿದ್ದರು.

ಆಳಸಿಂಗರ ಜನಪ್ರಿಯತೆ ಎಷ್ಟೆಂದರೆ ಅವರು ಮನೆಯಿಂದ ಹೊರಟರೆ ಅವರನ್ನು ಕರೆದೊಯ್ಯಲು ಗಾಡಿಯವರು ನಾ ಮುಂದು ತಾ ಮುಂದು ಎಂದು ಸಿದ್ಧರಾಗುತ್ತಿದ್ದರು. ಆಳಸಿಂಗರು ಯಾರಿಗೂ ನೋವಾಗದಂತೆ ಅವರನ್ನು ಸಮಾಧಾನಪಡಿಸಿ ಗಾಡಿ ಏರುತ್ತಿದ್ದರು. ಅವರ ಮನೆಯ ಮುಂದೆ ಜನರು ಸಹಾಯ ಕೇಳಲು ಸಾಲುಗಟ್ಟಿ ನಿಲ್ಲುತ್ತಿದ್ದರು. ಅವರಿಗೆ ಜನರ ಪರಿಚಯ ಎಷ್ಟಿತ್ತೆಂದರೆ ಮೈಸೂರಿನ ಮಹಾರಾಜರಿಗೆ ಪತ್ರ ಬರೆದು ಶ್ರೀ ಪಾರ್ಥಸಾರಥಿ ದೇವಾಲಯದ ಸೇವೆಗಾಗಿ ಆನೆಯೊಂದನ್ನು ತರಿಸಿಕೊಟ್ಟರು. ಆಳಸಿಂಗರ ಮಾತನ್ನು ಬ್ರಿಟಿಷ್ ಪೋಲಿಸ್ ಅಧಿಕಾರಿಗಳು ಸಹ ಗೌರವದಿಂದ ಸ್ವೀಕರಿಸುತ್ತಿದ್ದರು.

ಸ್ವಾಮಿ ವಿವೇಕಾನಂದರ ವಿಜಯವಾರ್ತೆ ನಾಡಿನಲ್ಲೆಲ್ಲ ಹರಡಿತು. ಆಳಸಿಂಗರಿಗಂತೂ ಇದು ಪರಮಾನಂದದ ವಿಷಯವಾಗಿದ್ದಿತು. ಸಮ್ಮೇಳನದ ವಿಷಯಗಳನ್ನೂ, ವರದಿಗಳನ್ನೂ ಮನೆಯಿಂದ ಮನೆಗೆ ಹೋಗಿ ಸಾರಿ ಬರುತ್ತಿದ್ದರು. ಇದಕ್ಕಾಗಿ ೨೮.೦೪.೧೮೯೪ರಲ್ಲಿ ಒಂದು ಬೃಹತ್ ಅಭಿನಂದನಾ ಸಭೆಯನ್ನೂ ಏರ್ಪಡಿಸಿದರು. ಸ್ವಾಮೀಜಿಯವರ ಮಾರ್ಗದರ್ಶನದಂತೆ ಮುನ್ನಡೆಯುತ್ತಿದ್ದ ಆಳಸಿಂಗರ ಕಾರ್ಯಕ್ಷೇತ್ರ ಮತ್ತಷ್ಟು ದೊಡ್ಡದಾಯಿತು. ವೇದಾಂತ ದೃಷ್ಟಿಯ ಪತ್ರಿಕೆಯನ್ನು ಪ್ರಾರಂಭಿಸುವ ಉದ್ದೇಶದಿಂದ 'ಬ್ರಹ್ಮವಾದಿನ್' ಎಂಬ ವಾರಪತ್ರಿಕೆಯನ್ನು ಪ್ರಾರಂಭಿಸಿದರು. ಇದಕ್ಕಾಗಿ ಹಗಲೂ ಇರುಳೂ ಪತ್ರಿಕೆಯ ಎಲ್ಲ ಕೆಲಸಗಳನ್ನೂ ಮಾಡಬೇಕಾಗುತ್ತಿತ್ತು. ಆ ದಿನಗಳಲ್ಲಿ ಇದೊಂದು ಪ್ರಮುಖ ಇಂಗ್ಲಿಷ್ ಪತ್ರಿಕೆಯಾಗಿದ್ದು ಇದಕ್ಕೆ ಇಂಗ್ಲೆಂಡ್, ಅಮೆರಿಕ ನಿವಾಸಿಗಳೂ ಚಂದಾದಾರರಾಗಿದ್ದರು. 'ಇಂಡಿಯಾ' ಎಂಬ ತಮಿಳು ಪತ್ರಿಕೆ, 'ಬಾಲಭಾರತಿ' ಎಂಬ ಮಕ್ಕಳ ಪತ್ರಿಕೆ 'ಪ್ರಬುದ್ಧ ಭಾರತ' ಮುಂತಾದ ಪತ್ರಿಕೆಗಳಿಗೂ ಸಹಾಯ ಮಾಡುತ್ತಿದ್ದರು. ಈ ಸಮಯದಲ್ಲಿ ಆಳಸಿಂಗರಿಗೆ ತಮಿಳು ಭಾಷೆಯ ಪ್ರಸಿದ್ಧ ಕವಿ ಸುಬ್ರಹ್ಮಣ್ಯ ಭಾರತಿಯವರ ನಿಕಟ ಪರಿಚಯ ಆಯಿತು. ಹೀಗೆ ಸಮಾಜದ ಅತ್ಯುನ್ನತ ವ್ಯಕ್ತಿಯಿಂದ ಹಿಡಿದು ಕೆಳವರ್ಗದವರೆಗೆ ಎಲ್ಲ ಜನರ ಪರಿಚಯ ಅವರಿಗಾಯಿತು.

ಸ್ವಾಮಿ ವಿವೇಕಾನಂದರು ವಿಶ್ವವಿಜಯಿಯಾಗಿ ಹಿಂದಿರುಗಿದಾಗ ಆಳಸಿಂಗರಿಗೆ ಎಲ್ಲಿಲ್ಲದ ಸಡಗರ. ಕುದುರೆ ಸಾರೋಟಿನಲ್ಲಿ ಸ್ವಾಮಿಜಿಯವರ ಮೆರವಣಿಗೆ ಮದರಾಸಿನಲ್ಲಿ. ಆದರೆ ಜನರು ಕುದುರೆಯನ್ನು ಬಿಚ್ಚಿ ತಾವೇ ಸಾರೋಟನ್ನು ಎಳೆದರು. ಸ್ವಾಮೀಜಿಯವರೊಂದಿಗೆ ಆಳಸಿಂಗರೂ ಕಲ್ಕತ್ತೆಗೆ ಹೋದರು. ಆಳಸಿಂಗರ ಕಚ್ಚೆಪಂಚೆ, ಕ್ಲೋಸ್‌ಕಾಲರ್ ಕೋಟು, ಮೈಸೂರು ಪೇಟ, ಹೆಗಲ ಮೇಲೆ ಉತ್ತರೀಯ, ಹಣೆಯಲ್ಲಿ ನಾಮ ಇವುಗಳನ್ನು ನೋಡಿದೊಡನೆ ಶುದ್ಧ ವೈದಿಕ ಸಂಪ್ರದಾಯಕ್ಕೆ ಸೇರಿದವರು ಎನಿಸಿದರೂ ಅವರು

ಉತ್ತಮ ವಿಚಾರವಾದಿಯಾಗಿದ್ದರು. ಸಂಪ್ರದಾಯ ಮನೆತನಕ್ಕೆ ಸೇರಿದ ಇವರು ಸಂಪ್ರದಾಯವನ್ನೂ ಪಾಲಿಸುತ್ತಿದ್ದರು, ವಿಚಾರ ವಾದಿಯಾಗಿ ಅದ್ವೈತವಾದಿ ವಿವೇಕಾನಂದರ ಶಿಷ್ಯರೂ ಆಗಿದ್ದರು. "ಹಳೆ ಬೇರು ಹೊಸ ಚಿಗುರು ಮೂಡಿರಲು ಮರ ಸೊಗಸು" ಎಂಬ ಕವಿವಾಣಿಯಂತೆ ಆಚಾರ-ವಿಚಾರ ಮೇಳೈಸಿದಂತಿದ್ದರು ಅಳಸಿಂಗ ಪೆರುಮಾಳ್. ಅವರ ಈ ವೇಷವನ್ನು ಕಂಡು ಅಸಹ್ಯಪಟ್ಟ ಯೂರೋಪಿಯನ್ ಶಿಷ್ಯೆಗೆ ಸ್ವಾಮೀಜಿ ಅಸಮಾಧಾನಗೊಂಡು ಹೇಳಿದರು, "ಅವರು ನನ್ನನ್ನು ಜಗತ್ತಿಗೆ ಪರಿಚಯಿಸಿದ ಶ್ರದ್ಧಾಳು" ಎಂದು. ಅಳಸಿಂಗರು ತಾವು ಮಾತ್ರ ವಿಚಾರವಾದಿಯಾಗಿದ್ದರು ಮಾತ್ರವಲ್ಲ, ಜನರನ್ನೂ ಹಾಗಿರುವಂತೆ ಪ್ರೇರೇಪಿಸುತ್ತಿದ್ದರು. ಒಮ್ಮೆ ಮದರಾಸಿನಲ್ಲಿ ಸಮುದ್ರ ಉಕ್ಕಿ ನಗರ ಮುಳುಗುತ್ತದೆ ಎಂಬ ವದಂತಿ ಹಬ್ಬಿ ಜನರು ಹೆದರಿ ಊರು ಬಿಡಲು ತೊಡಗಿದಾಗ ಜನರ ಮೌಢ್ಯವನ್ನು ದೂರಮಾಡಲು ತಮ್ಮ ಮಿತ್ರರೊಂದಿಗೆ ಸಮುದ್ರ ತೀರಕ್ಕೆ ಹೋಗಿ ಅಲ್ಲಿಯೇ ಬೀಡುಬಿಟ್ಟರು. ಅವರಿಗೆ ಏನೂ ಆಗದಿದ್ದುದನ್ನು ಕಂಡ ಜನ ಭಯವನ್ನು ಬಿಟ್ಟರು.

ಮೃದುಸ್ವಭಾವದ ಅಳಸಿಂಗರು ಯಾರಿಗೂ ನೋವಾಗುವುದನ್ನು ಸಹಿಸುತ್ತಿರಲಿಲ್ಲ. ಸನ್ನಿವೇಶಕ್ಕೆ ತಕ್ಕಂತೆ ಉತ್ತಮ ಮಾರ್ಗದಿಂದ ಎಲ್ಲರಿಗೂ ಸಂತೋಷವಾಗುವಂತೆ ನೋಡಿಕೊಳ್ಳುತ್ತಿದ್ದರು. ಒಮ್ಮೆ ಒಬ್ಬ ಹರಿಜನವ್ಯಕ್ತಿ ಶ್ರೀಪಾರ್ಥಸಾರಥಿ ದೇವಾಲಯಕ್ಕೆ ಗೋದಾನ ನೀಡಲು ಬಂದನು. ಆದರೆ ದೇವಾಲಯದ ಧರ್ಮದರ್ಶಿಗಳು ಆತನಿಂದ ದಾನ ಸ್ವೀಕರಿಸಲು ಸಿದ್ಧರಿರಲಿಲ್ಲ. ಆಗ ಅಳಸಿಂಗರು ಆತನಿಗೆ ನೋವಾಗದಂತೆ, ಅವನಿಂದ ತಾವು ಹಸುವನ್ನು ಖರೀದಿಸಿ ದತ್ತೆ ಮಾಡಿ ಅದನ್ನು ಅವನ ಎದುರಿಗೇ ದೇವಾಲಯಕ್ಕೆ ಒಪ್ಪಿಸಿದರು.

ಜನತಾ ಜನಾರ್ದನರ ಸೇವೆಯನ್ನು ಜನರಿಗೆ ಕೇವಲ ಅನುಕೂಲ ಮಾಡಿಕೊಡುವುದು ಮಾತ್ರವಲ್ಲ ರೋಗಿಗಳ ಸೇವೆ ಮಾಡುವುದರ ಮೂಲಕವೂ ಮಾಡುತ್ತಿದ್ದರು. ತಮ್ಮ ಭಾವ ಪ್ರೊ.ರಂಗಾಚಾರ್ಯರ ಮಗಳ ಮದುವೆಗೆ ಬಂದ ಅತಿಥಿಯೊಬ್ಬರಿಗೆ ವಾಂತಿ, ಭೇದಿ ಪ್ರಾರಂಭವಾದಾಗ ಎಲ್ಲರೂ ಹೆದರಿದರು. ಅಳಸಿಂಗರು ಅವರನ್ನು ತಮ್ಮ ಮನೆಗೆ ಕರೆದುಕೊಂಡು ಬಂದು ಸೇವೆ ಮಾಡಿದರು. ಹೀಗೆ ಮಾಡುವಾಗ ಮದುವೆ ಬಿಟ್ಟು ಅವರನ್ನು ನೋಡಿಕೊಳ್ಳಬೇಕಾಯಿತಲ್ಲ ಎಂಬ ಬೇಸರವಾಗಲಿ, ಕೋಪವಾಗಲಿ, ಅವರ ಸೇವೆ ಮಾಡುವಾಗ ತಮಗೂ ಕಾಯಿಲೆ ಬರಬಹುದೆಂಬ ಭಯವಾಗಲಿ, ಅಸಹ್ಯವಾಗಲಿ ಇರಲಿಲ್ಲ.

ಅಳಸಿಂಗ ಪೆರುಮಾಳರೆಂದರೆ ಜನರಿಗೆ ಪೂರ್ಣ ನಂಬಿಕೆ. ಒಮ್ಮೆ ಅವರ ಮಗಳ ಮದುವೆಯಲ್ಲಿ ಮದುಮಗಳಿಗೆ ಹಾಕಲು ಶೆಟ್ಟರ ಮನೆಯಿಂದ ಒಡವೆಗಳನ್ನು ಎರವಲು ತರಲು ಹೋಗುತ್ತಿದ್ದರು. ದಾರಿಯಲ್ಲಿ ಸಿಕ್ಕಿದ ಶ್ರೀಮಂತ ವೈಶ್ಯ ಮಹಿಳೆಗೆ ವಿಷಯ ತಿಳಿದು "ಒಡವೆ ತರಲು ಅಷ್ಟು ದೂರ ಹೋಗಬೇಕೆ? ನಾನೇ ಕೊಡುತ್ತೇನೆ ಬನ್ನಿ" ಎಂದು ಹೇಳಿ ತನ್ನ ಮನೆಯ ಸೇಫ್ ರೂಮಿನ ಬೀಗದ ಕೈಯನ್ನು ಅವರಿಗಿತ್ತು ಒಳಗೆ ಹೋದಳು. ಅಳಸಿಂಗರನ್ನು ನೀವು ಯಾವ ಒಡವೆ ಎಷ್ಟು ಒಡವೆ ತೆಗೆದುಕೊಂಡಿದ್ದೀರಿ ಎಂದೂ ಕೇಳದೆ ಕಳುಹಿಸಿಕೊಟ್ಟಳು.

ಅಳಸಿಂಗರು ಸರಳ ಮತ್ತು ಸಜ್ಜನ ವ್ಯಕ್ತಿ. ಆದರೆ ಅನ್ಯಾಯಕ್ಕೆ, ದರ್ಪಕ್ಕೆ ಎಂದೂ ಹೆದರುತ್ತಿರಲಿಲ್ಲ. ಒಮ್ಮೆ ಪ್ರೊ.ರಂಗಾಚಾರ್ಯರನ್ನು ಬೀಳ್ಕೊಡಲು ಅಳಸಿಂಗರು ರೈಲ್ವೆ ನಿಲ್ದಾಣಕ್ಕೆ ಹೋಗಿದ್ದರು. ಗಾಡಿಯ ಕಂಬಿಯನ್ನು ಹಿಡಿದು ಮಾತನಾಡುತ್ತಿದ್ದಾಗ ಬಂದ ಬ್ರಿಟಿಷ್ ಪ್ರಯಾಣಿಕನೊಬ್ಬ ಅವರಿಗೆ ದಾರಿಬಿಡಿ ಎಂದೂ ಹೇಳದೆ ಕೈಹಿಡಿದು ಜಗ್ಗಿ ಪಕ್ಕಕ್ಕೆ ತಳ್ಳಿದನು. ಅವನ ಧೂರ್ತತೆಗೆ ತಕ್ಕ ಉತ್ತರವಾಗಿ ಅಳಸಿಂಗರು ಅವನ ಕೆನ್ನೆಗೆ ಬಲವಾಗಿ ಏಟು ಕೊಟ್ಟರು. ಬ್ರಿಟಿಷ್ ಪ್ರಯಾಣಿಕ ಪೊಲೀಸರನ್ನು ಕರೆಯಲು ಓಡಿದ. ಆದರೆ ಬಂದ ಬ್ರಿಟಿಷ್ ಅಧಿಕಾರಿ ಅಳಸಿಂಗರನ್ನು ನೋಡಿದೊಡನೆಯೇ ಗೌರವದಿಂದ ಅವರಿಗೆ ವಂದಿಸಿ ಆ ಪ್ರಯಾಣಿಕನಿಗೆ ಹೇಳಿದ: "ನೀನೇ ಅಸಭ್ಯತೆಯಿಂದ ವರ್ತಿಸಿರಬೇಕು. ಕ್ಷಮೆ ಕೇಳು."

ತಮ್ಮ ಅಲ್ಪ ವರಮಾನದಲ್ಲೇ ಸಂತೃಪ್ತ ಜೀವನ ನಡೆಸಿ, ಅತಿಥಿ ಅಭ್ಯಾಗತರ ಸೇವೆ, ದಾನ-ಧರ್ಮ ಎಲ್ಲವನ್ನೂ ನಡೆಸಿಕೊಂಡು ಬಂದವರು ಶ್ರೀ ಅಳಸಿಂಗರು. ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸಲು ಸ್ವಾಮೀಜಿಯವರ ಅಮೆರಿಕನ್ ಶಿಷ್ಯರು ಮುಂದಾದರು. ಆದರೆ ಅಳಸಿಂಗರು ಅದನ್ನು ವಿನಯದಿಂದ ನಿರಾಕರಿಸಿದರು.

ಮಧ್ಯವಯಸ್ಸಿನಲ್ಲಿ ಪತ್ನಿವಿಯೋಗ, ಅಪ್ರಾಪ್ತವಯಸ್ಸಿನ ಮಕ್ಕಳ ಪೋಷಣೆ ಇವುಗಳೊಂದಿಗೆ ಸೇರಿ ಬಂದಿತು ಕೆಳದವಡೆಯ ಕ್ಯಾನ್ಸರ್. ಅಂತಹ ನೋವಿನಲ್ಲಿಯೂ ಅವರ ಜನಸೇವೆಗೆ ಯಾವ ಕುಂದೂ ಉಂಟಾಗಲಿಲ್ಲ. ಮೌನವಾಗಿಯೇ ಎಲ್ಲವನ್ನೂ ಸಹಿಸಿದರು. ಅವರ ಯೋಚನೆ ರಾಷ್ಟ್ರದ ಉನ್ನತಿಯನ್ನು ಕುರಿತೇ ಆಗಿತ್ತು. ೧೯೦೯ನೇ ಮೇ ಹನ್ನೊಂದರಂದು ಅವರು ದೇಹತ್ಯಾಗ ಮಾಡಿದರು. ಆಗ ಅವರಿಗಿನ್ನೂ ೪೫ ವರ್ಷ ವಯಸ್ಸು. [ಆಧಾರ ಗ್ರಂಥ: *ಕರ್ಮಯೋಗಿ ಅಳಸಿಂಗ ಪೆರುಮಾಳ್*, ಲೇಖಕ: ಲ.ನ ಶಾಸ್ತ್ರಿ]

### ನಗುವಿನ ಅಲೆಯಲ್ಲಿ ದೇವರು

ಒಮ್ಮೆ ಸ್ವಾಮಿ ವಿವೇಕಾನಂದರು ಫ್ರಾನ್ಸಿಸ್ ಲೆಗೆಟ್‌ರ ರಿಜ್‌ಲಿ ಮೇನರ್ ಮನೆಯಲ್ಲಿ ಕೆಲವು ದಿನ ತಂಗಿದ್ದರು. ಲೆಗೆಟ್‌ರ ಮಗ ಹಾಲಿಸ್ಟರ್‌ಗೆ ಒಮ್ಮೆ ಸ್ವಾಮೀಜಿಯ ಮಲಗುವ ಕೋಣೆಯಿಂದ ನಗುವಿನ ದೊಡ್ಡ ಅಲೆಗಳು ತೇಲಿಬರುತ್ತಿರುವುದು ಕೇಳಿಸಿತು. ಅನಂತರ, ಸ್ವಾಮೀಜಿ ಹೊರಬಂದಾಗ ಹುಡುಗ ಕೇಳಿದ, "ಸ್ವಾಮೀಜಿ, ತಾವು ಯಾರೊಡನೆ ಮಾತನಾಡುತ್ತಿದ್ದಿರಿ?" ಎಂದು. "ನಾನೊಬ್ಬನೇ ಧ್ಯಾನದಲ್ಲಿದ್ದೆ" ಎಂದು ಉತ್ತರವಿತ್ತರು. "ಆದರೆ ಅಷ್ಟೊಂದು ನಗುವಿನ ಶಬ್ದ ಕೇಳಿಬರುತ್ತಿತ್ತಲ್ಲ?" ಎಂದು ಹಾಲಿಸ್ಟರ್ ಆಶ್ಚರ್ಯದಿಂದ ಕೇಳಿದ. ಸ್ವಾಮೀಜಿ, "ಓಹ್! ದೇವರು ಹಾಸ್ಯಪ್ರಿಯನು!" ಎಂದರು.